
ಬಾಗಿಲು ತೆಗೆದಿದೆ. ಬಾಗಿಲಿಗೆ ಹೊಂದಿಕೊಂಡು ಒಂದು ಪಾದರಕ್ಷೆಗಳ ಸ್ಟ್ಯಾಂಡ್. ಅಲ್ಲಿ ಅಂಗೈ ಅಗಲದಷ್ಟು ಇರುವ ಒಂದು ಜೊತೆ ಕೆಂಪು ಬಣ್ಣದ ಶೂ. ಪಕ್ಕದಲ್ಲಿ ಕಿತ್ತುಹೋಗಿರುವ ಚಪ್ಪಲಿಗಳು. ಎರಡು ಜೊತೆ ಹೆಂಗಸರ ಪಾದರಕ್ಷೆಗಳು. ಅವುಗಳಲ್ಲಿ ಒಂದು ಜೊತೆ ಶೂ. ಮತ್ತು ಮತ್ತೊಂದು ಜೊತೆ ಹೊಸ ಚಪ್ಪಲಿಗಳು. ಇದನ್ನು ಹಾದು ಹೋದರೆ ತಕ್ಷಣಕ್ಕೆ ಮನೆಯ ನಡುಕೋಣೆ. ಗೋಡೆ ಗಡಿಯಾರದಲ್ಲಿ ಸಮಯ ಎರಡೂವರೆ ತೋರಿಸುತ್ತಿತ್ತು. ಎದುರು ಒಂದು ಜಲವರ್ಣಚಿತ್ರ. ಬೆಂಕಿ. ಬೆಂಕಿಯ ಮೇಲೆ ಒಂದು ಮಣ್ಣಿನ ಗುಡಾಣ ಅದರ ಮೇಲೆ ಒಂದು ಮರ ಅದರ ಮೇಲೆ ಒಂದು ಹಕ್ಕಿ ಅದರ ಮೇಲೆ ಆಮೆ ಅದರ ಮೇಲೆ ಒಂದು ರಾಕೆಟ್ ಹೋಗಿರುವ ಹೊಗೆಯ ಹಾದಿ ಮತ್ತು ನೀಲಿ ಆಕಾಶ. ಬಲಭಾಗದಲ್ಲಿ ಒಂದು ಪುಟ್ಟ ದೇವರಕೋಣೆ. ಯಾವ ದೇವರ ಫೋಟೋಗಳು ಇಲ್ಲ. ಒಂದೇ ಒಂದು ಕಂಚಿನ ತೂಗುದೀಪ. ಅದರೊಳಗೆ ಎಣ್ಣೆ ಇಲ್ಲ. ಒಂದು ಅಂಗುಲದಷ್ಟು ಉರಿದು ಉಳಿದಿರುವ ಬತ್ತಿ. ಕುಡಿ ಕಪ್ಪಾಗಿದೆ. ಅದು ಬಿಟ್ಟರೆ ಮತ್ತೇನಿಲ್ಲ. ಹೊರಗೆ ಮಳೆ ಬರುತ್ತಿದೆ. ಮತ್ತು ದೇವರಕೋಣೆಯನ್ನು ಹಾದು ಎಡಕ್ಕೆ ತಿರುಗಿದರೆ ಅಡುಗೆಕೋಣೆ. ಒಲೆಯ ಮೇಲೆ ಅನ್ನದ ಪಾತ್ರೆ. ಒಂದು ಅಗುಳನ್ನೂ ಮುಟ್ಟಿಲ್ಲ. ಹಾಗೆ ಇದೆ. ತಣ್ಣಗಾಗಿದೆ. ಪಕ್ಕದಲ್ಲಿ ಮಾಂಸದ ಸಾರು. ವಾಸನೆ ಬರುತ್ತಿದೆ. ಆದರೆ ತಣ್ಣಗಾಗಿದೆ. ಬೆಕ್ಕು ಆಗಷ್ಟೇ ಅಲ್ಲಿಯ ಕಿಟಕಿಯ ಆಚೆ ಓಡಿದೆ. ಅದರ ಬಾಲದ ತುದಿ ಮಾತ್ರ ಕಾಣುತ್ತಿದೆ. ಮಳೆ ನಿಂತಿತು. ಮನೆಯ ಯಾವುದೋ ಒಂದು ಮೂಲೆಯಿಂದ ಗಾಳಿಯ ಘಂಟೆ ಅಲುಗಾಡಿದ ಸದ್ದು ಮನೆಯಲ್ಲಿ ಅಸ್ತಿತ್ವವನ್ನು ಸ್ಥಾಪಿಸಿ ಮಾಯವಾಯಿತು. ನಡುಮನೆಯ ಕೋಣೆಗೆ ಹೊಂದಿಕೊಂಡು ಒಂದು ಬೆಡ್‌ರೂಮ್. ಇಪ್ಪತ್ತೈದು ವಯಸ್ಸಿನ ಹೆಣ್ಣೊಬ್ಬಳು ರಗ್ಗಿನಲ್ಲಿ ಅರ್ಧದೇಹವನ್ನು ಮುಚ್ಚಿಕೊಂಡು ಅರ್ಧ ಮಲಗಿದ್ದಾಳೆ. ಎರಡೂ ಕೈಗಳು ಒಂದು ಪುಸ್ತಕವನ್ನು ಹಿಡಿದುಕೊಂಡಿವೆ. ಅವಳು ಪುಸ್ತಕದ ಪುಟಗಳನ್ನು ನೋಡುತ್ತಿದ್ದಾಳೆ. ಓದುತ್ತಿಲ್ಲ. ವಿಶಾಲವಾದ ಕೋಣೆ ಅದು. ಮಂಚದ ತುಸುದೂರದಲ್ಲಿ ಒಂದು ಸುಂದರ ಕೆತ್ತನೆಯ ಮರದ ಹಲಗೆಯನ್ನು ಅಡ್ಡಲಾಗಿ ಇಡಲಾಗಿದೆ. ಅದರ ಆಚೆ ಒಂದು ಮೇಜು. ಅದರ ಮೇಲೆ ರಾಶಿ ಫೈಲುಗಳು. ಲೇಖನಿಗಳನ್ನು ತುಂಬಿಕೊಂಡಿರುವ ಮಣ್ಣಿನ ಕುಡಿಕೆ. ಇಪ್ಪತ್ತೈದರ ಆಸುಪಾಸಿನ ವ್ಯಕ್ತಿಯೊಬ್ಬ ತಲೆಯನ್ನು ಬಾಗಿಸಿ ಮಲಗಿದ್ದಾನೆ. ಈ ಕೋಣೆಯ ಪಕ್ಕದಲ್ಲಿ ಒಂದು ಪುಟ್ಟಕೋಣೆ. ಅದರಲ್ಲಿ ನಾಲಕ್ಕು ನಾಲಕ್ಕುವರೆ ವರ್ಷದ ಹುಡುಗಿ. ಮೊಬೈಲನ್ನು ಹಿಡಿದುಕೊಂಡು ಅದರೊಳಗೆ ಮಗ್ನಳಾಗಿದ್ದಾಳೆ. ಮಳೆ ಮತ್ತೆ ಜೋರಾಯಿತು. ಇದೇ ದೃಶ್ಯ ಸಂಜೆಯ ಕೊನೆಯ ತನಕ ಇತ್ತು. ಮಳೆ ನಿಂತರೂ ಆಕಾಶ ಕಪ್ಪು ಮೋಡಗಳಿಂದ ತುಂಬಿದೆ.



'ಚುರುಮುರಿ, ಮಿರ್ಚಿ?'

'ಹ್ಞಾ. ಇಲ್ಲಿ ಸಿನ್ನಮನ್ ಟೀ ಸಿಗುತ್ತೆ'.

'ಮಗಳಿಗೂ ಒಂದು ಪಾರ್ಸಲ್'.

'ಸಣ್ಣ ಸಂಗತಿಯನ್ನು ಬೆಟ್ಟದಷ್ಟು ಮಾಡ್ತೀಯಾ.' 'ನಾನಲ್ಲ ನೀನು.' 'ಶತಮಾನಗಳ ಕಾಲ ಇಲ್ಲೇ ಇರುತ್ತೀವಿ ಅನ್ನುವ ಥರ ಮಾತಾಡ್ತೀಯಾ.' 'ಇಷ್ಟೆ ಸಾಕು, ಇನ್ನು ಶತಮಾನಗಳ ಕಾಲ ಬದುಕುವ ಹಾಗಿದ್ದಿದ್ದರೆ, ಮುಗಿತು ಕತೆ.' 'ಈ ಥರ ಒದ್ದಾಡಿಕೊಂಡು ಯಾಕೆ ಬದುಕಬೇಕು ಅಂತ, ಹ್ಞಾ?' 'ಇಷ್ಟ ಪಟ್ಟು ಮದುವೆ ಆಗಿದ್ದಕ್ಕೆ ಸಾರ್ಥಕ.' 'ಯಾವ ಥರ ಆಗಿದ್ದರೂ ಹೀಗೇನೆ, ಮನುಷ್ಯರ ಸ್ವಭಾವ ಹೀಗೆ.' 'ಇದನ್ನೇ ಸಮರ್ಥನೆ ಮಾಡಿಕೊಂಡು ಹೀಗೆಲ್ಲ ಮಾಡುವುದಕ್ಕೆ ಆಗುತ್ತ?' 'ಎಲ್ಲ ಮಾತಿನಿಂದ.' 'ಎಲ್ಲ ಮೌನದಿಂದ.'

ಸರಿ ಸಂಜೆ ಫೋನ್ ಮಾಡ್ತೀನಿ, ಬಾ, ಓ.ಕೆ ಬಾಯ್ ಎಂದು ಹೇಳಿ, 'ಅಪ್ಪ ಒಂದು ಚಮಕ್ ನಿನಗೆ' 'ಏನು?!' 'ಅಮ್ಮ ಹೇಳಿದಳು ನಿನಗೆ ಬಿದ್ದ ಕನಸನ್ನು.' ಹಳೆಯ ಕಾಲದ ಪುಟ್ಟ ಶಹರ. ಅಲ್ಲಿಯ ಆ ಸದ್ದಿನಲ್ಲೂ ಹತ್ತಿರದ ಮರವೊಂದರಲ್ಲಿ ಪಕ್ಷಿ ಕೂಗುತ್ತಿತ್ತು.

'ಸರ್ ನಿಮ್ಮನ್ನು ನೋಡುವುದಕ್ಕೆ ಒಬ್ಬರು